ದಿನಾಂಕಃ 21.08.2025

ಅಸಲುದಾವಃ 97/2020

ಡಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ಸಾಲ ಪಡೆಯುವ ಸಮಯದಲ್ಲಿ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡರೆ ಬಡ್ಡಿಯ ಪ್ರಮಾಣ ಕಡಿಮೆ ಇರುತ್ತದೆ ಅಥವಾ ಬೇರೆ ವ್ಯಕ್ತಿಗಳ ಬಳಿ ಸಾಲ ತೆಗೆದುಕೊಂಡರೆ ಬಡ್ಡಿಯ ಪ್ರಮಾಣ ಜಾಸ್ತಿ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಹಾಗಾಗಿ ಸಾಮಾನ್ಯವಾಗಿ ಜನರು ಬ್ಯಾಂಕ್ ಗಳಲ್ಲಿ ಸಾಲ ತೆಗೆದುಕೊಳ್ಳುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು ಸಾಲ ಮಾಡಿರುವುದಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿ ಹೌದು, ಜನಗಳ ಹತ್ತಿರ ಸಾಲ ಮಾಡಿದ್ದು ಎಂದು ಉತ್ತರಿಸುತ್ತಾರೆ. ನನ್ನ ತಂದೆಯ ಹೆಸರಿನಲ್ಲಿ ವಾಣಿಜ್ಯ ಕಟ್ಟಡಗಳು ಇರುತ್ತವೆ ಎಂದರೆ ಸರಿ. ನಿಮ್ಮ ತಂದೆಯ ಹೆಸರಿನಲ್ಲಿ ಇರುವ ವಾಣಿಜ್ಯ ಕಟ್ಟಡಗಳ ಆದಾರದ ಮೇಲೆ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬಹುದು ಎಂದರೆ ಸಾಕ್ಷಿ ಬ್ಯಾಂಕಿನಲ್ಲಿ ಕುಟುಂಬದ ಎಲ್ಲಾರ ಪ್ರಮಾಣ ಪತ್ರ ಹಾಗು ಇತ್ಯಾದಿ ದಾಖಲಾತಿಗಳನ್ನು ಕೇಳುತ್ತಾರೆ, ಹಾಗಾಗಿ ಆಸ್ಪತ್ರೆಯಲ್ಲಿ ಇರುವ ತಮ್ಮನಿಗೆ ಚಿಕಿತ್ಸೆ ಕೊಡಿಸುವುದು ಮುಖ್ಯವಾಗಿದ್ದರಿಂದ ಮೊದಲು ಜನರ ಬಳಿ ಸಾಲ ತೆಗೆದುಕೊಳ್ಳುವುದು ಅಗತ್ಯವಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಜನರ ಬಳಿ ಸಾಲ ತೆಗೆದುಕೊಂಡಿರುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸಾಕ್ಷಿ ಜನರು ನಮಗೆ ನಂಬಿಕೆಯ ಮೇಲೆ ಸಾಲ ಕೊಟ್ಟಿರುವುದು ಎಂದು ಉತ್ತರಿಸುತ್ತಾರೆ. ಜನರು ನಂಬಿಕೆಯ ಮೇಲೆ ಎಷ್ಟು ಸಾಲ ಕೊಟಿಪ್ಪಿದ್ದಾರೆ ಎಂದರೆ ಸಾಕ್ಷಿ ಆಸ್ಪತ್ರೆಗೆ ಎಷ್ಟು ಅಗತ್ಯ ಇರುತ್ತದೊ ಆಗೆಲ್ಲಾ ಸಾಲ ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಯಾರು ಯಾರು ಎಷ್ಟೆಷ್ಟು ಸಾಲ ಕೊಟ್ಟಿದ್ದಾರೆ ಹೇಳಬಹುದಾ ಎಂದರೆ ಸಾಕ್ಷಿ ಹೇಳುತ್ತೇನೆ, ರವಿಕುಮಾರ್ ಬಿನ್ ವೆಂಕಟೇಗೌಡಅವರು ರೂ.6 ಲಕ್ಷ ಕೊಟ್ಟಿದ್ದಾರೆ, ಪುಟ್ಟಸ್ವಾಮಿ ಬಿನ್ ಚಿಕ್ಕಣ್ಣರವರು ರೂ.5 ಲಕ್ಷ ಕೊಟ್ಟಿದ್ದಾರೆ, ಮಹೇಶ್ ಬಿನ್ ಲಿಂಗೇಗೌಡರವರು ರೂ.3 ಲಕ್ಷ ಕೊಟ್ಟಿದ್ದಾರೆ, ಜಯಲಕ್ಷ್ಮಿ ಕೋಂ ಚೌಡಯ್ಯರವರು ರೂ.5 ಲಕ್ಷ ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ನಾವು ಮೇಲೆ ಹೇಳಿದವರಿಂದ ಆಸ್ಪತ್ರೆಯಲ್ಲಿ ತುರ್ತು ಅವಶ್ಯಕತೆ ಇದ್ದಾಗ ಬೇರೆ ಜನಗಳಿಂದ ಈಸಿಕೊಂಡಿದ್ದು ತದನಂತರ ಈ ಮೇಲೆ ಹೇಳಿದವರಿಂದ

ಸಾಲ ಪಡೆದು ಜನರ ಅಸಲು ಮತ್ತು ಬಡ್ಡಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನೀವು ಈ ಮೇಲೆ ಹೇಳಿದಷ್ಟು ಸಾಲವನ್ನು ಯಾರು ಕೇಲವ ನಂಬಿಕೆಯ ಆದಾರದ ಮೇಲೆ ಕೊಡುವುದಿಲ್ಲ, ದಾಖಲೆಗಳನ್ನು ಪಡೆದುಕೊಳ್ಳುತ್ತಾರೆ ಎಂದರೆ ಸಾಕ್ಷಿ ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಈ ರೀತಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಇನ್ನೊಬ್ಬ ತಮ್ಮ 2007 ರಲ್ಲಿ ತೀರಿಕೊಂಡಿದ್ದಾರೆ. ಅವರು ತೀರಿಕೊಳ್ಳುವ ಕಾಲಕ್ಕೆ ಅವರಿಗೆ 19 ವರ್ಷ ವಯಸ್ಸಾಗಿತ್ತು. ಅವರು ತೀರಿಕೊಳ್ಳುವ ಕಾಲಕ್ಕೆ 10 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಸದರಿಯವರು ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾಗದೆ ತೀರಿಕೊಂಡಿರುವ ಕಾರಣ ಅವರಿಗೆ ದಾವ ಆಸ್ತಿಗಳಲ್ಲಿ ಯಾವುದೇ ಭಾಗ ಬರುವುದಿಲ್ಲ ಎಂದರೆ ಸಾಕ್ಷಿ ತಾಯಿ ಗಾರ್ಡಿಯನ್ ಆಗಿರುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ತಮ್ಮ ಪುನಿತ್ ಅವರ ಮದುವೆಯನ್ನು ಕುಟುಂಬ ಸಮೇತ ನಾನೇ ನಿಂತು ಮದುವೆ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ನೆನಪಿಸಿಕೊಂಡು ನನ್ನ ತಮ್ಮ ವೆಂಕಟೇಶ್ ದಿ.20.07.2009 ರಲ್ಲಿ ತೀರಿಕೊಂಡಿರಬಹುದು, ಸ್ವಲ್ಪ confusion ಇದೆ ಎಂದು ಹೇಳುತ್ತಾರೆ. ನನ್ನ ತಮ್ಮನ ಮದುವೆಗೆ ನಮ್ಮ ಕಾಲೇಜಿನ ಸಹ ಉಪನ್ಯಾಸಕರು ಬಂದಿರಲಿಲ್ಲ. ನಮ್ಮ ಕಾಲೇಜಿನ ಅಧ್ಯಕ್ಷರಾದ ಮಧು.ಜಿ. ಮಾದೇಗೌಡರವರು ಬಂದಿದ್ದರು. ಈಗ ತೋರಿಸಿದ ಪೋಟೋಗಳು ನನ್ನ ತಮ್ಮನ ಮದುವೆಯ ಪೋಟೋಗಳು ಎಂದರೆ ಸರಿ. ಸಾಕ್ಷಿ ಸದರಿ 4 ಪೋಟೋಗಳನ್ನು ನೋಡಿ ಒಪ್ಪಿರುವ ಕಾರಣ ಒಟ್ಟಾಗಿ ನಿಪಿ 18 ಎಂದು ಗುರುತಿಸಲಾಗಿದೆ. (ಸದರಿ ಪೋಟೋಗಳನ್ನು ನಿಶಾನೆಗಳಾಗಿ ಗುರುತಿಸಲು ಅವುಗಳ ಸಿ.ಡಿ ಇಲ್ಲವೆಂದು ಪ್ರತಿವಾದಿ ಪರ ವಕೀಲರು ತಕರಾರು ಎತ್ತಿರುತ್ತಾರೆ, ಆದರೆ ಸಾಕ್ಷಿ ಅವುಗಳನ್ನು ನೋಡಿ ಒಪ್ಪಿರುವ ಕಾರಣ ನಿಶಾನೆಗಳಾಗಿ ಗುರುತಿಸಲಾಗಿದೆ.) ಸಾಕ್ಷಿ ಮುಂದುವರಿದು ನನ್ನ ತಮ್ಮನ ಮದುವೆಯ ಕಾಲಕ್ಕೆ ನನ್ನ ಹೆಂಡತಿ ಬಾಣಂತಿಯಾಗಿದ್ದರು, ಅವರು ಮದುವೆಗೆ ಬಂದಿದ್ದರೋ ಇಲವ್ರೊ ಎಂಬುದು ಅನುಮಾನವಿದೆ ಎಂದು ಹೇಳುತ್ತಾರೆ. ಸದರಿ ಪೋಟೋಗಳಲ್ಲಿ ನಿಮ್ಮ ಹೆಂಡತಿ ಕಾಣುತ್ತಿದ್ದಾರೆ ಎಂದರೆ ಸಾಕ್ಷಿ ಕಾಣುತ್ತಿದ್ದಾರೆ ಎಂದು ಉತ್ತರಿಸುತ್ತಾರೆ. ನನ್ನ ತಮ್ಮನ ಮದುವೆಗೆ ಆಹ್ವಾನ ಪತ್ರಿಕೆ ಮಾಡಿಸಿ ಸಂಬಂಧಿಕರೆಲ್ಲರನ್ನು ಕರೆದಿದ್ದೆನು ಎಂದರೆ ಸರಿ. ಈಗ ತೋರಿಸಿದ ದಾಖಲಾತಿ ನನ್ನ ತಮ್ಮನ ಮದುವೆಯ ಆಮಂತ್ರಣ ಪತ್ರ ಎಂದರೆ ಸರಿ. ಸಾಕ್ಷಿ ಒಪ್ಪಿರುವ ಕಾರಣ ಸದರಿ ದಾಖಲಾತಿಯನ್ನು ನಿಪಿ19 ಎಂದು ಗುರುತಿಸಲಾಯಿತು.

ಈಗ ತೋರಿಸಿದ ರೇಷನ್ ಕಾರ್ಡಿನಲ್ಲಿ ಇರುವ ಪೋಟೋ ನನ್ನ ತಾಯಿ ಬಾಗ್ಯಮ್ಮದವರಾಗಿರುತ್ತದೆ. ಸಾಕ್ಷಿ ಒಪ್ಪಿರುವ ಕಾರಣ ಸದರಿ ದಾಖಲಾತಿಯನ್ನು ನಿಪಿ 20 ಎಂದು ಗುರುತಿಸಲಾಗಿರುತ್ತದೆ. ಸದರಿ ನಿಪಿ20 ರಲ್ಲಿ ನಮೂದಿರುವ ತಿಮ್ಮೇಗೌಡ ನಮ್ಮ ತಂದೆ. ದಿವ್ಯ ನನ್ನ ತಮ್ಮನ ಹೆಂಡತಿ, ಲೋಹಿತ್ ನನ್ನ ತಮ್ಮನ ಮಗ. ನಿಪಿ 8 ಪೋಟೊದಲ್ಲಿ ಕಾಣುವ ಮನೆ ಭಾರತಿನಗರದಿಂದ ಮಂಡ್ಯಕ್ಕೆ ಬರುವ ರಸ್ತೆಯ ಪಕ್ಕದಲ್ಲಿ ಇದೆ ಎಂದರೆ ಸರಿ. ಸದರಿ ಪೋಟೋದಲ್ಲಿ 4 ಮನೆಗಳು ಇವೆ ಎಂದರೆ ಸಾಕ್ಷಿ 2 ಮನೆಗಳು ಮತ್ತು ಒಂದು ರೂಮ್ ಇದೆ, ಒಂದು ಮನೆಗೆ ಎರಡು ಬಾಗಿಲುಗಳು ಇವೆ ಎಂದು ಉತ್ತರಿಸುತ್ತಾರೆ.ಮೇಲಿನ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ 4 ಮನೆಗಳಲ್ಲಿ ಒಂದು ಮನೆಯಲ್ಲಿ ನಿಮ್ಮ ತಂದೆ ತಾಯಿ ವಾಸಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಎಲ್ಲರೂ ಒಟ್ಟಿಗೆ ವಾಸವಾಗಿದ್ದೇವೆ ಎಂದು ಉತ್ತರಿಸುತ್ತಾರೆ. ಯಾರು ಯಾರು ಒಟ್ಟಿಗೆ ವಾಸವಿದ್ದೀರಿ ಎಂದರೆ ಸಾಕ್ಷಿ ನಾನು, ನನ್ನ ತಂದೆ ತಾಯಿ ಮತ್ತು ಮಕ್ಕಳು ಎಂದು ಉತ್ತರಿಸುತ್ತಾರೆ. ಇನ್ನೊಂದು ಮನೆಯಲ್ಲಿ ನಿಮ್ಮ ದೊಡ್ಡಪ್ಪನ ಮಗ ನಾಗೇಶ್ ವಾಸವಾಗಿದ್ದಾನೆ ಎಂದರೆ ಸಾಕ್ಷಿ ಪಕ್ಕದಲ್ಲಿಯೇ ಅವರು ಹೊಸದಾಗಿ ಮನೆ ಕಟ್ಟುತ್ತಿದ್ದಾರೆ, ಉಳಿದುಕೊಳ್ಳಲು ಮನೆ ಇಲ್ಲವೆಂದು ನಮ್ಮ ಪಕ್ಕದ ಇನ್ನೊಂದು ಮನೆಯಲ್ಲಿ ವಾಸವಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ಮನೆಗೆ ತಿಂಗಳಿಗೆ ರೂ.5000/- ಬಾಡಿಗೆ ಪಡೆಯುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಸದರಿ ಮನೆಗೆ ರೂ.100000/- ಮುಂಗಡ ಹಣ ಪಡೆದಿದ್ದೇವೆ ಎಂದರೆ ಸುಳ್ಳು. ಉಳಿದ 2 ಮನೆಗಳನ್ನು ತಲಾ ರೂ.5000/-ಗಳಿಗೆ ಬಾಡಿಗೆ ಹಾಗು ತಲಾ ರೂ.100000/- ಮುಂಗಡ ಹಣ ಪಡೆದಿದ್ದೇವೆ ಎಂದರೆ ಸರಿಯಲ್ಲ. ನಿಪಿ 9 ಪೋಟೋದಲ್ಲಿ ಒಟ್ಟು 5 ಅಂಗಡಿ ಮಳಿಗೆಗಳು ಇವೆ ಎಂದರೆ ಸಾಕ್ಷಿ 4 ಮಳಿಗೆಗಳು ಇವೆ ಎಂದು ಉತ್ತರಿಸುತ್ತಾರೆ. ಆ 5 ಅಂಗಡಿಗಳಲ್ಲಿ 4 ದೊಡ್ಡ ಅಂಗಡಿಗಳು ಮತ್ತು 1 ಚಿಕ್ಕ ಅಂಗಡಿ ಇದೆ ಎಂದರೆ ಸಾಕ್ಷಿ 9*12 ವಿಸ್ತೀರ್ಣದ 4 ಅಂಗಡಿಗಳು ಇವೆ ಎಂದು ಉತ್ತರಿಸುತ್ತಾರೆ. ಸದರಿ ಅಂಗಡಿ ಮಳಿಗೆಗಳಲ್ಲಿ 1 ದೊಡ್ಡ ಅಂಗಡಿ ಮಳಿಗೆಯನ್ನು ಚಿಕ್ಕ ಅರಸಿನಕೆರೆ ಗ್ರಾಮದ ಪ್ರಶಾಂತ್ ಅವರಿಗೆ ಎಲೆಕ್ಟ್ರಿಕಲ್ ಮತ್ತು ಗೃಹಬಳಕೆಗಳ ಮಾರಾಟ ಮಳಿಗೆ ನಡೆಸಲು ಬಾಡಿಗೆಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಇನ್ನೊಂದು ದೊಡ್ಡ ಮಳಿಗೆಯಲ್ಲಿ ನಂದಿನ ಹಾಲಿನ ಅಂಗಡಿ ಇದೆ ಎಂದರೆ ಸರಿ. ಇನ್ನೊಂದು ಚಿಕ್ಕ ಅಂಗಡಿ ಮಳಿಗೆಯಲ್ಲಿ ಟೀ ಅಂಗಡಿ ಇದೆ ಎಂದರೆ ಸರಿಯಲ್ಲ. ದೊಡ್ಡ ಅಂಗಡಿ ಮಳಿಗೆಗೆ ತಲಾ ರೂ.8000/-ದಂತೆ ಬಾಡಿಗೆ ಪಡೆದುಕೊಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು

ಉತ್ತರಿಸುತ್ತಾರೆ. ಎಷ್ಟು ಬಾಡಿಗೆ ಪಡೆಯುತ್ತಿದ್ದೀರಿ ಎಂದರೆ ಸಾಕ್ಷಿ ತಲಾ 1000/- ಎಂದು ಉತ್ತರಿಸುತ್ತಾರೆ. ಚಿಕ್ಕ ಅಂಗಡಿಗೆ ಎಷ್ಟು ಬಾಡಿಗೆ ಪಡೆಯುತ್ತಿದ್ದೀರಿ ಎಂದರೆ ಸಾಕ್ಷಿ ಎಲ್ಲವೂ ಒಂದೇ ವಿಸ್ತೀರ್ಣ ಇದೆ ಎಂದು ಉತ್ತರಿಸುತ್ತಾರೆ. ಮೇಲಿನ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೊಡ್ಡ ಅಂಗಡಿಗೆ ತಲಾ ರೂ.100000/- ಮುಂಗಡ ಹಣ ಪಡೆದಿದ್ದೀರಿ ಎಂದರೆ ಸಾಕ್ಷಿ ಇಲ್ಲ ರೂ.5000/- ಎಂದು ಉತ್ತರಿಸುತ್ತಾರೆ. ಚಿಕ್ಕ ಅಂಗಡಿ ಮಳಿಗೆಗೆ ರೂ.50000/- ಮುಂಗಡ ಹಣ ಪಡೆದಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಎಷ್ಟು ಪಡೆಯುತ್ತಿದ್ದೀರಿ ಎಂದರೆ ಸಾಕ್ಷಿ ಚಿಕ್ಕ ಅಂಗಡಿ ಇಲ್ಲವೇ ಇಲ್ಲ ಎಂದು ಉತ್ತರಿಸುತ್ತಾರೆ. ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ10 ರಲ್ಲಿ ಕಾಣುವ ಅಂಗಡಿ ಮಳಿಗೆ ಮದ್ದೂರು ಮಳವಳ್ಳಿ ಮಖ್ಯ ರಸ್ತೆಯಲ್ಲಿ ಇದೆ ಎಂದರೆ ಸರಿ. ಕೆ.ಎಂ.ದೊಡ್ಡಿ ಭಾರತಿ ಕಾಲೇಜಿನ ಅಕ್ಕ ಪಕ್ಕದಲ್ಲಿ ಅಂಗಡಿ ಮಳಿಗೆಗಳು ಇವೆ ಎಂದರೆ ಸರಿ. ಆ ಸ್ಥಳದಲ್ಲಿ ಜನ ಸಂದಣಿ ಜಾಸ್ತಿ ಇರುತ್ತದೆ ಎಂದರೆ ಸಾಕ್ಷಿ ಸಾಮಾನ್ಯವಾಗಿ ಜಾಸ್ತಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಆ ಸ್ಥಳದಲ್ಲಿ ಕಾಲೇಜು ಇರುವ ಕಾರಣ ಅಕ್ಕ ಪಕ್ಕದ ಎಲ್ಲಾ ಅಂಗಡಿ ಮಳಿಗೆಗಳಿಗೂ ಹೆಚ್ಚಿನ ಬಾಡಿಗೆ ಮತ್ತು ಮುಂಗಡ ಹಣ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ 10 ರಲ್ಲಿ ಕಾಣುವ ಅಂಗಡಿ ಮಳಿಗೆ ಭಾರತಿ ಕಾಲೇಜಿನ ಎದುರುಗಡೆಗೆ ಇದೆ ಎಂದರೆ ಸರಿ. ನಿಪಿ 10 ರ ಅಂಗಡಿ ಮಳಿಗೆ 2 ಅಂತಸ್ಥಿನ ಅಂಗಡಿ ಮಳಿಗೆ ಎಂದರೆ ಸರಿ. ಸದರಿ ಮಳಿಗೆಯಲ್ಲಿ ನೆಲ ಅಂತಸ್ಥಿನ 2 ಮಳಿಗೆಗಳು ನಿಮ್ಮ ಒಟ್ಟು ಕುಟುಂಬಕ್ಕೆ ಸೇರಿದ್ದು ಎಂದರೆ ಹೌದು ಎಂದು ಉತ್ತರಿಸುತ್ತಾರೆ. ಕೆಳಗೆ ಇರುವ 2 ಮಳಿಗೆಗಳಲ್ಲಿ ಒಂದು ಮೆಡಿಕಲ್ ಶಾಪ್ ಇನ್ನೊಂದು ಕಂಪ್ಯೂಟರ್ ಸೆಂಟರ್ ಇದೆ ಎಂದರೆ ಸರಿ. ಸದರಿ ಮೆಡಿಕಲ್ ಶಾಪ್ ಗೆ ತಿಂಗಳಿಗೆ ರೂ.8000/- ಬಾಡಿಗೆ ಪಡೆಯುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ಮೆಡಿಕಲ್ ಶಾಪ್ ಗೆ ತಿಂಗಳಿಗೆ ರೂ.1500/- ಬಾಡಿಗೆ ಪಡೆಯುತ್ತಿದ್ದೇವೆ. ಸದರಿ ಕಂಪ್ಯೂಟರ್ ಸೆಂಟರ್ ಗೆ ತಿಂಗಳಿಗೆ ರೂ.1500/- ಬಾಡಿಗೆ ಪಡೆಯುತ್ತಿದ್ದೇವೆ. ಮೇಲಿನ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 2 ಮಳಿಗೆಗಳಿಗೆ ತಲಾ ರೂ,100000/- ಮುಂಗಡ ಹಣ ಪಡೆದಿದ್ದೇವೆ ಎಂದರೆ ಸರಿಯಲ್ಲ. ಸದರಿ ಮಳಿಗೆಗಳಿಗೆ ತಲಾ ರೂ,10000/- ಮುಂಗಡ ಹಣ ಪಡೆದಿದ್ದೇವೆ. ಮೇಲಿನ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿಪಿ10 ರ ಮೊದಲನೇ ಅಂತಸ್ಥಿನಲ್ಲಿ 2 ಅಂಗಡಿ ಮಳಿಗೆಗಳು ಇವೆ ಎಂದರೆ ಸರಿ. ಸದರಿ ಅಂಗಡಿ ಮಳಿಗೆಗಳನ್ನು

ಒಂದು ಬಟ್ಟೆ ಅಂಗಡಿ ಇನ್ನೊಂದು SLV enterprises ರವರಿಗೆ ಬಾಡಿಗೆ ಕೊಟ್ಟಿದ್ದೇವೆ ಎಂದರೆ ಸಾಕ್ಷಿ ಒಂದು ಬಟ್ಟೆ ಅಂಗಡಿ ಇದೆ, ಇನ್ನೊಂದು ಖಾಲಿ ಇದೆ ಸ್ಥಳದಲ್ಲಿಯೇ ಬಾಡಿಗೆಗೆ ಬರುತ್ತಾರೆ ಎಂದು ಉತ್ತರಿಸುತ್ತಾರೆ. ಖಾಲಿ ಯಾವುದೂ ಇಲ್ಲ, ಚಾಲ್ತಿಯಲ್ಲಿ ಇದ್ದು ವಹಿವಾಟು ನಡೆಯುತ್ತಿದೆ ಎಂದರೆ ಸಾಕ್ಷಿ ಒಂದು ಖಾಲಿ ಇದೆ ಎಂದು ಉತ್ತರಿಸುತ್ತಾರೆ. ಸದರಿ ಮಳಿಗೆಗಳಿಗೆ ತಲಾ ರೂ.8000/-ದಂತೆ ಬಾಡಿಗೆ ಪಡೆಯುತ್ತಿದ್ದೇವೆ ಎಂದರೆ ಸರಿಯಲ್ಲ. ತಲಾ ರೂ.1000/- ಬಾಡಿಗೆ ಪಡೆಯುತ್ತಿದ್ದೇವೆ. ತಲಾ ರೂ.100000/-ಮುಂಗಡ ಪಡೆದಿದ್ದೇವೆ ಎಂದರೆ ಸರಿಯಲ್ಲ. ತಲಾ ರೂ.5000/- ಮುಂಗಡ ಹಣ ಪಡೆದಿದ್ದೇವೆ. ವಾದಿಗಳಿಗೆ ಮೋಸ ಮಾಡುವ ಉದೇಶದಿಂದ ಮೇಲಿನ ರೀತಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 11 ರಲ್ಲಿ ಕಾಣುವ ಅಂಗಡಿ ಮಳಿಗೆಗೆ ಮದ್ದೂರು ಮಳವಳ್ಳಿ ರಸ್ತೆಯಲ್ಲಿ ಇವೆ ಎಂದರೆ ಸರಿ. ನಿಪಿ 11 ರಲ್ಲಿ ಒಟ್ಟು 5 ಅಂಗಡಿ ಮಳಿಗೆಗಳು ಇವೆ ಎಂದರೆ ಸಾಕ್ಷಿ ಅಂಗಡಿ ಮಳಿಗೆಗಳು ನಮ್ಮದಲ್ಲ, ಜಾಗ ಮಾತ್ರ ನಮ್ಮ ಕುಟುಂಬಕ್ಕೆ ಸೇರಿದ್ದು ಎಂದು ಉತ್ತರಿಸುತ್ತಾರೆ. ಸದರಿ 5 ಅಂಗಡಿ ಮಳಿಗೆಗಳು ನಿಮ್ಮ ಒಟ್ಟು ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ಅದನ್ನು ಚಾಕನಹಳ್ಳಿ ಗ್ರಾಮದ ಕಾಳೀರೇಗೌಡರಿಗೆ ಬಾಡಿಗೆಗೆ ಕೊಟ್ಟಿದ್ದೇವೆ ಎಂದರೆ ಸರಿ. ಸದರಿ ಅಂಗಡಿ ಮಳಿಗೆಗಳಲ್ಲಿ ಕಬ್ಬಿಣ ಮತ್ತು ಸಿಮೆಂಟ್ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಇಲ್ಲ, ವ್ಯಾಪಾರ ನಡೆಯುತ್ತಿಲ್ಲವೆಂದು ಸ್ಥಗಿತಗೊಳಿಸಿದ್ದಾರೆ ಎಂದು ಉತ್ತರಿಸುತ್ತಾರೆ. ಯಾವ ವರ್ಷದಿಂದ ಸ್ಥಗಿತಗೊಳಿಸಿದ್ದಾರೆ ಎಂದರೆ ಸಾಕ್ಷಿ ಇಲ್ಲಿಗೆ 1 - 1 ½ ವರ್ಷ ಆಯಿತು ಎಂದು ಉತ್ತರಿಸುತ್ತಾರೆ. ಸುಮಾರು 2 ವರ್ಷ ವ್ಯಾಪಾರ ಮಾಡಿದರು, ಅದರಲ್ಲಿ 6 ತಿಂಗಳು ವ್ಯಾಪಾರ ಆಯಿತು ಎಂದು ಉತ್ತರಿಸುತ್ತಾರೆ. ಈಗಲೂ ಅಲ್ಲಿ ವ್ಯಾಪಾರ ನಡೆಯುತ್ತಿದೆ ಎಂದರೆ ಸಾಕ್ಷಿ ಇಲ್ಲ, ಅಂಗಡಿ ಮಾತ್ರ ಉಳಿಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. 5 ಅಂಗಡಿಗಳಿಂದ ತಿಂಗಳಿಗೆ ರೂ.50000/- ಬಾಡಿಗೆ ಬರುತ್ತದೆ ಎಂದರೆ ಸರಿಯಲ್ಲ. ನೆಲ ಬಾಡಿಗೆ ಕೇವಲ ರೂ.1000/- ಮಾತ್ರ ಬರುತ್ತಿದೆ, ಅಂಗಡಿ ಮಳಿಗೆಯನ್ನು ಅವರೇ ಕಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಮೇಲಿನ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಅಂಗಡಿ ಮಳಿಗೆಗೆ ಒಟ್ಟು ರೂ.200000/- ಮುಂಗಡ ಹಣ ಪಡೆದಿದ್ದೆವೆ ಎಂದರೆ ಸರಿಯಲ್ಲ, ರೂ.5000/- ಪಡೆದಿದ್ದೇವೆ ಎಂದು ಉತ್ತರಿಸುತ್ತಾರೆ. ನಿಪಿ12 ರಲ್ಲಿ ಕಾಣುವ ಮಳಿಗೆ ಭಾರತಿನಗರ ಮಂಡ್ಯ ಮುಖ್ಯ ರಸ್ತೆಯಲ್ಲಿ ಬರುತ್ತದೆ ಎಂದರೆ ಸರಿ. ಸದರಿ ಜಾಗವನ್ನು ಮಾತ್ರ ಭಾಗ್ಯಲಕ್ಷ್ಮಿ ಆಟೋ ಲಿಂಕ್ಸ್ ಗೆ ಬಾಡಿಗೆಗೆ

ಕೊಟ್ಟಿದ್ದೇವೆ. ನೆಲ ಮಾತ್ರ ಬಾಡಿಗೆಗೆ ಕೊಟ್ಟಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಳಿಗೆಗಳಿಗೆ ಪ್ರತಿ ತಿಂಗಳು ರೂ.20000/–ಬಾಡಿಗೆಗೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನೆಲವನ್ನು ಮಾತ್ರ ತಿಂಗಳಿಗೆ ರೂ.1000/– ಕ್ಕೆ ಬಾಡಿಗೆಗೆ ಕೊಟ್ಟಿದ್ದೇವೆ. ಮುಂಗಡ ಹಣವಾಗಿ ರೂ.200000/– ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ರೂ.5000/– ಮುಂಗಡ ಹಣವಾಗಿ ಪಡೆದುಕೊಂಡಿದ್ದೇವೆ. ನಿಪಿ 13 ರಲ್ಲಿ ಕಾಣುವ ಮನೆ ನಿಮ್ಮ ಒಟ್ಟು ಕುಟುಂಬಕ್ಕೆ ಸೇರಿದ ಮನೆ ಎಂದರೆ ಸಾಕ್ಷಿ ಅಲ್ಲ ಎಂದು ಉತ್ತರಿಸುತ್ತಾರೆ. ಸದರಿ ನಿಪಿ13 ರಲ್ಲಿ ಕಾಣುವ ಸ್ವತ್ತು ನಮ್ಮ ತಂದೆಯ ಭಾಗಕ್ಕೆ ಬಂದಿರುವುದಿಲ್ಲ. ಸದರಿ ಮನೆ ನಿಮ್ಮ ತಂದೆಯ ಭಾಗಕ್ಕೆ ಬಂದಿದ್ದರೂ ಸಹ ಬಂದಿಲ್ಲವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಮನೆಯಿಂದ ನಿಮಗೆ ತಿಂಗಳಿಗೆ ರೂ.2000/– ಬಾಡಿಗೆ ಬರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಮನೆಗೆ ರೂ.10000/– ಮುಂಗಡ ಹಣ ಪಡೆದಿದ್ದೇವೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ನಿಮ್ಮ ಕುಟುಂಬಕ್ಕೆ ಸೇರಿದ್ದರೂ ಸಹ ಸೇರಿಲ್ಲವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನನಗೆ ಆ ಸ್ವತ್ತಿನ ಬಗ್ಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.